ಶ್ರೀ ಕೆ.ಹೆಚ್. ರಂಗನಾಥ್ : ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಸೇತುವೆ ಭದ್ರವಾಗಿದೆ. ಕುಸಿಯತಕ್ಕಂತಹ ಪರಿಸ್ಥಿತಿ ಏನೂ ಇಲ್ಲ 4.3 ಮೀಟರ್ ಆಗಿರುವುದರಿಂದ 2 ವಾಹನಗಳು ಹೋಗುವುದಕ್ಕೆ ಸಾಧ್ಯವಾಗಿಲ್ಲ. ಅದರ ಭದ್ರತೆ ಬಗ್ಗೆ ಸ್ಟೆಬಿಲಿಟಿ ಬಗ್ಗೆ ನಾವು ಸಂಶಯ ಪಡಬೇಕಿಲ್ಲ ಅದು ಭದ್ರವಾಗಿದೆ.

ಉಪಾಧ್ಯಕ್ಷಣಿಯವರು : ಈಗ ನಿಯಮ 334 ತೆಗೆದುಕೊಳ್ಳೋಣ.

ನಿಯಮ 334ರ ಮೇರೆಗೆ

1991-92ನೇ ಸಾಲಿನಲ್ಲಿ ಶಾಸಕರ ಮತಕ್ಷೇತ್ರಗಳಲ್ಲಿ 40 ಲಕ್ಷ ರೂಪಾಯಿಗಳ ಕಾಮಗಾರಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ 1991-92ನೇ ಸಾಲಿನಲ್ಲಿ ಪ್ರತಿಯೊಬ್ಬ ಶಾಸಕರಿಗೂ 40ಲಕ್ಷ ರೂಪಾಯಿ ಹಣದ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅಧಿಕಾರ ನೀಡಲಾಯಿತು. ಅದರಲ್ಲಿ ನನ್ನ ಸೇಡಂ ಮತ ಕ್ಷೇತ್ರದಲ್ಲಿ ಕಮಲಾವತಿ ನದಿಗೆ ಬೆಟಗೇರ ಸಮೀಪ ಈಗಿರುವ ಕೆಳದರ್ಜೆ ಸೇತುವೆಯನ್ನು ಎತ್ತರಿಸಿ ಮೇಲ್ದರ್ಜೆ ಸೇತುವೆ ನಿರ್ಮಿಸಲು ಸುಮಾರು 32 ಲಕ್ಷ ರೂಪಾಯಿ, ಮುಧೋಳ ಪ್ರವಾಸಿ ಮಂದಿರಕ್ಕೆ 3 ಲಕ್ಷ ರೂಪಾಯಿ ಸೇಡಂ ಪ್ರವಾಸಿ ಮಂದಿರಕ್ಕೆ ಹತ್ತಿರ ಅಡೀಪಾಯದವರೆಗೆ ಆಗಿರುವ ಕೋಣೆಗಳಿಗೆ ಎರಡು ಲಕ್ಷ ರೂಪಾಯಿ ಹಾಗೂ ಸೇಡಂ ಕ್ಷೇತ್ರದ ಚಿತಾಪುರ ತಾಲ್ಲೂಕಿನ ರಾಮತೀರ್ಥ ಗ್ರಾಮದ ಸಮೀಪ ಸಿಮೆಂಟ್ ರಸ್ತೆಯ ರೋಡ್ ಡ್ಯಾಂಗೆ 4 ಲಕ್ಷ ರೂಪಾಯಿಗಳ ಅಂದಾಜು ಪತ್ರಗಳನ್ನು ಕಳುಹಿಸಲಾಗಿತ್ತು. ಆದರೆ ಇಲ್ಲಿಯವರೆಗೆ ಇದರ ಬಗ್ಗೆ ಯಾವ ಮಾಹಿತಿ ಇಲ್ಲ. ಕಾಮಗಾರಿಗಳು ಪ್ರಾರಂಭವಾಗಿಲ್ಲ. ಈ ಕಾಮಗಾರಿಗಳನ್ನು ಪ್ರಾರಂಭ ಮಾಡಿ ಮುಗಿಸುವುದು ಯಾವಾಗ ಎಂದು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

Sri K.H. Ranganath (Minister for Public works) I take note of this statement.

ಗಂಗಮಕ-ಮೊಗವೀರ, ಅರಬಿಗ, ಬೆಸ್ತ, ಇತ್ಯಾದಿ ಪಂಗಡಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆ.

ಶ್ರೀ ಬಾಬುರಾವ್ ಚಿಂಚನಸೂರ್ : (ಚಿತ್ತಾಪುರ) ಮಾನ್ಯ ಉಪಾಧ್ಯಕ್ಷಣಿಯವರೇ ಕಬ್ಬಲಿಗೆ, ಕೋಳಿ, ಗಂಗಮತ, ಮೊಗವೀರ, ಅಂಬಿಗ, ಬೆಸ್ತ, ಬೆಸ್ತರು, ನೈಕೋಡಿ, ತಳವಾರ, ನಾಟಿಕೆರೆ, ಸೂಗಾರ್, ಕೊಳಿದೋರ್, ಮಹದೇವಕೋಳಿ ಮತ್ತು ಇತ್ಯಾದಿ ಪಂಗಡಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಸುಮಾರು 3 ವರ್ಷಗಳಿಂದ ಸತತವಾಗಿ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿ ಹೋರಾಟ ಮಾಡಿದರೂ ಸಹ ಇದುವರೆವಿಗೂ ಯಾವ ಪ್ರಯೋಜನವಾಗಿರುವುದಿಲ್ಲ. ಈ ಗುಂಪಿನ ಜನರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಕೀಳು ಮಟ್ಟದಲ್ಲಿದ್ದರೂ ಸಹ ಸರ್ಕಾರದವರು ಗಮನ ಹರಿಸದೆ ಮಲತಾಯಿ ಧೋರಣೆಯಿಂದ ಕಡೆಗಣಿಸಿಕೊಂಡು ಬರುತ್ತಿದ್ದಾರೆ.

ದಿನಾಂಕ. 20.3.1992ರಂದು ಮಾಜಿ ಮುಖ್ಯಮಂತ್ರಿಗಳು ಈ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಸಚಿವ ಸಂಪುಟದ ಮುಂದೆ ಮಂಡಿಸಲು ಮಾನ್ಯ